ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ: ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಕೆನರಾ ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್ ಲಿಮಿಟೆಡ್‌ನ ಬಗ್ಗೆ

೧೮೩೩. **ಶ್ರೀ ಎನ್.ಎಂ. ಅಡ್ಯಂತಾಯ (ಸುಂರತ್ಕಲ್).**—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಸ್ವಾಮಿತ್ವದ ಕೆನರಾ ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್ ಲಿಮಿಟೆಡ್‌ನ ಸ್ಥಾಪನೆಯ ಉದ್ದೇಶಗಳೇನು; ಮತ್ತು ಹೂಡಿದ ಬಂಡವಾಳವೆಷ್ಟು;

ಆ) ಮೇಲ್ಕಂಡ ಸಂಸ್ಥೆಯ ನೋಂದಾಯಿತ ಕಚೇರಿಯೆಲ್ಲಿದೆ;

ಇ) ಇದರಲ್ಲಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು.)

ಅ) ಕೆನರಾ ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್ ಲಿಮಿಟೆಡ್ ರಾಜ್ಯ ಸರ್ಕಾರದ ಸ್ವಾಮಿತ್ವದ ಕಂಪನಿಯಲ್ಲ ಹಿಂದೆ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಯೊಂದನ್ನು ಪ್ರಾರಂಭಿಸುವ ಉದ್ದೇಶದಿಂದ ಈ ಕಂಪನಿಯನ್ನು ಅಭಿವೃದ್ಧಿಗೊಳಿಸಿ ಕಾರ್ಯರೂಪಕ್ಕೆ ತರಲು ಯತ್ನಿಸಿತ್ತು. ಈ ಕಂಪನಿಯು ಕಾರ್ಯ ಚಟುವಟಿಕೆಗಳು ೧೯೭೬ ರಿಂದ ಸ್ಥಗಿತಗೊಂಡಿದೆ. ನಿಗಮವು ಈ ಸಂಸ್ಥೆಯಲ್ಲಿ ೧೦,೦೬೦-೦೦ಗಳ ಬಂಡವಾಳವನ್ನು ಹೂಡಿತ್ತು.

ಆ) ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳು ನಿಗಮದ ನೋಂದಾಯಿತ ಕಚೇರಿಯಲ್ಲಿಯೇ ನಡೆಯುತ್ತಿತ್ತು. ಈ ಸಂಸ್ಥೆಗೆ ಬೇರೆ ಯಾವುದೇ ನೋಂದಾಯಿತ ಕಚೇರಿಯು ಇರುವುದಿಲ್ಲ.

ಇ) ಈ ಕಂಪನಿಯ ವ್ಯವಹಾರವನ್ನು ನಿಗಮದ ನೌಕರರೇ ಮಾಡುತ್ತಿದ್ದರು.

ದಿನಗೂಲಿ ನೌಕರರಿಗೆ ನೀಡುತ್ತಿರುವ ನಿತ್ಯ ವೇತನ ಕುರಿತು

೧೮೮೪. **ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ):**—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿರುವ ದಿನಗೂಲಿ ನೌಕರರ ಸಂಖ್ಯೆಯೆಷ್ಟು?

ಆ) ದೈನಂದಿನ ಕಾರ್ಯಗಳಿಗೆ ಇಲಾಖೆ ನೇಮಿಸಿಕೊಳ್ಳುವ ಕಾರ್ಮಿಕರಿಗೆ ನೀಡುತ್ತಿರುವ ನಿತ್ಯ ವೇತನವೆಷ್ಟು?

ಇ) ಈ ಕಾರ್ಯಗಳನ್ನು ಗುತ್ತಿಗೆದಾರರಿಗೆ ವಹಿಸಿಕೊಡುವ ಯೋಜನೆ ಸರ್ಕಾರದವರ ಮುಂದಿದೆಯೇ?